ಸಿ.ಆರ್. ಶ್ರೀನಿವಾಸ್, ಊರಿಲ್ಲ

ಹುಡುಗಿ ವಿವಾಹಿತೆಯೆನ್ನಲು ಮಾಂಗಲ್ಯ ಗುರುತು; ಹುಡುಗ ವಿವಾಹಿತನೆನ್ನಲು?



ಎದುರು ಕುಳಿತ ಸುಂದರಿಯನ್ನು ನಿರಾಶೆಯಿಂದ ನೋಡುವವನು ವಿವಾಹಿತ.

ಕೆ. ಹೊನ್ನಪ್ಪ, ಕ್ಯಾತ್ಸಂದ್ರ

ಬಾಯಿಂದ ಮಾತು ಹೇಗೆ ಬರುತ್ತದೆ ಎಂದು ನನ್ನ ನಾಲ್ಕು ವರ್ಷದ ಮೊಮ್ಮಗ ಕೇಳುತ್ತಿದ್ದಾನೆ...?

ಮಿದುಳು ಟ್ಯಾಂಕ್; ಬಾಯಿ ನಲ್ಲಿ. ಬಾಯಿ ಬಿಟ್ಟಾಗ ಟ್ಯಾಂಕಿನಲ್ಲಿರುವ ಮಾತುಗಳು ಹರಿಯುತ್ತವೆ.

ಗ.ಸು. ಬೆಂಗಳೂರು

ವಿಷ್ಣುವಿನ ಪಾದವನ್ನು ಲಕ್ಷ್ಮಿ ಒತ್ತುತ್ತಿರುತ್ತಾಳಲ್ಲಾ, ಹೆಂಡತಿ ಗಂಡನ ಚರಣದಾಸಿಯೆ?

ಊಹೂಂ. 'ಅವತಾರ' ಎನ್ನುತ್ತಾ ಹೊರಡದಂತೆ 'ಹೌಸ್ ಅರೆಸ್ಟ್' ಮಾಡಲು ಲಕ್ಷ್ಮಿ ಹೂಡಿದ ಉಪಾಯವದು.

ತಲಕಾಡು ಶ್ರೀನಿಧಿ, ಬೆಂಗಳೂರು

ವಿಷ್ಣುವಿನ ನಾಲ್ಕು ಕೈಗಳಲ್ಲಿ ಒಂದು ಮೊಬೈಲ್ ಹಿಡಿಯೋದಾದ್ರೆ ಯಾವ ಕೈ ಖಾಲಿ ಮಾಡಿಸಬೇಕು?



ಶಖಿದ್ದು; ಮೊಬೈಲ್ ರಿಂಗ್ ಟೋನಲ್ಲೇ ಶಂಖ ಇಟ್ಟರಾಯ್ತು.

ವಿ. ಹಮೀದ್, ವಿಟ್ಲ

ಪ್ರೇಯಸಿ ಅಧ್ಯಯನಶೀಲತೆಗೆ ಒಪ್ಪುತ್ತಿಲ್ಲ. ಏನು ಮಾಡಲಿ?

ಆಕೆಗೆ 'ಅಧ್ಯಯನ' ಕೇಳಿಸುತ್ತಿಲ್ಲ, ಶೀಲ ತೆಗೆ ಮಾತ್ರ ಕೇಳಿಸುತ್ತಿದೆ. ಸ್ಪಷ್ಟವಾಗಿ ಮಾತನಾಡಿ.

ಶ್ರೀನಿವಾಸ ಹೆಚ್.ಡಿ. ಹಾಸನ

ಸಿನಿಮಾ ಹೆಂಡತಿಗೂ, ನಿಜಜೀವನದ ಹೆಂಡತಿಗೂ ಏನು ವ್ಯತ್ಯಾಸ?

ಸಿನಿಮಾ ಹೆಂಡತಿ ಅಗತ್ಯವಿದ್ದಾಗ ಮಾತ್ರ ಮಾತನಾಡುತ್ತಾಳೆ.

ನಾಗೇಶ ಮೈಸೂರು, ಸಿಂಗಪುರ್

ಹೆಂಡತಿಯ ಹೆಸರು ಸೀತೆ. ಗಂಡನ ಹೆಸರು ಲಂಕೇಶ್. ಸೀತೆಯನ್ನು ಅಪಹರಿಸುವವರು?

ಮಂಡೋದರಿ. ಸೀರಿಯಲ್‌ನ ಹೆಸರು 'ಗೊಂದಲ ರಾಮಾಯಣ'.

ಸೀಮಂತಿನಿ ದೇಸಾಯಿ, ಬೆಂಗಳೂರು

ಬಿಟ್ಟ ಸ್ಥಳ ತುಂಬಿಸಿ: ಬೆಂಗಳೂರು ಸಾರಿಗೆ; ಮದರಾಸು... ?

ಕಾವೇರಿ ನೀರಿಗೆ.

ಎ.ಹೆಚ್. ಶಿವಕುಮಾರ್, ಊರಿಲ್ಲ

ದಿನಬಳಕೆ ವಸ್ತುಗಳು ಏರುತ್ತಿವೆ. ಆದರೂ ಕೆಲವರು ರಾಮನಾಮ ಜಪ ಮಾಡ್ತಿದ್ದಾರಲ್ಲಾ...?

ಕೋತಿಗಳ ಕೈಗೆ ಆಡಳಿತ ಕೊಟ್ಟಮೇಲೆ ವಾನರಸೇನಾ ನಿಯಂತ್ರಕನನ್ನೇ ಜಪಿಸಬೇಕಲ್ಲ.

ಅನಸೂಯ ಟಿ. ಕೇದಿಗೆಮನೆ

ವಿಮಾನದಲ್ಲಿ ಗಗನ ಸಖಿಯರಿರುವಂತೆ ಬಸ್ಸು, ರೈಲುಗಳಲ್ಲೂ ಭೂಸಖಿಯರಿದ್ದರೆ?

ಇಲ್ಲಿಯೂ ಸುಂದರಿಯರ ಮೂಲಕ past food ಅನ್ನು fast food ಎಂದು ಮಾರಬಹುದು.

ಎನ್. ವೈದೇಹಿ, ಮೈಸೂರು

ಸರ್ಕಾರ ನಿಷೇಧಿಸಿದ ಪದಾರ್ಥಗಳಿಂದ ದೂರವಿರಬೇಕೆಂಬ ಅರಿವು ಜನರಲ್ಲಿ ಮೂಡುವುದು ಯಾವಾಗ?

ಅದೇ ಸರ್ಕಾರ ಅದೇ ಪದಾರ್ಥಗಳ ಉತ್ಪಾದನೆಗೆ ಬೀಗ ಹಾಕಿದಾಗ.

ವಿ. ಹೇಮಂತಕುಮಾರ್, ಬೆಂಗಳೂರು

ಮುಖದ ಸೌಂದರ್ಯಕ್ಕೂ, ಮನದ ಸೌಂದರ್ಯಕ್ಕೂ ವ್ಯತಾಸವೇನು ಸರ್?

ಇದು ಅಲ್ಪಕಾಲ ವೈನವಾಗಿರುವ ಹಾಲು. ಅದು ಹಳತಾದಷ್ಟೂ ಮಾಗುವ ವೈನ್.

ಐಶ್ವರ್ಯ ಬಿದರಹಳ್ಳಿ, ಹಿರೇಹಡಗಲಿ

ಹಸು ಏನೇ ತಿಂದರೂ ಹಾಲೇ ಹೆಚ್ಚುತ್ತದೆ. ಬೇವಿನಗಿಡಕ್ಕೆ ಏನೇ ಹಾಕಿದರೂ ಕಹಿಯೇ ಹೆಚ್ಚುತ್ತದೆ. ಏಕೆ?

ಹಸುವಿಗೆ ಮಕ್ಕಳ ಬಗ್ಗೆ ಕಾಳಜಿ, ಬೇವಿನಗಿಡಕ್ಕೆ ಮಧುಮೇಹಿಗಳ ಬಗ್ಗೆ ಕಾಳಜಿಯಂತೆ.

## ಬಹುಮಾನಿತ ಪ್ರಶ್ನೆ

ಸಿಹಿಮೊಗೆ ರಮೇಶ್, ಮೈಸೂರು

ಪಾಪ ಕಳೆದುಕೊಳ್ಳಲು ತೀರ್ಥಕ್ಷೇತ್ರಗಳಿಗೆ ಹೋಗೋಣವೆಂದರೆ ಅವೂ ಹಣ ಮಾಡುವ ಅಪವಿತ್ರ ತಾಣಗಳಾಗಿವೆಯಲ್ಲ...?

ಮನದ ಇಳೆಯ ಹಸನು ಮಾಡಿ ಗುಣದ ಬೆಳೆ ಬೆಳೆದರೆ ಸರ್ವಪಾಪ ಮಾಯವಾದೀತು.

ಬಿದರಹಳ್ಳಿ ಚೆನ್ನವೀರಪ್ಪ, ಹಿರೇಹಡಗಲಿ

ಸತ್ತವರಿಗೆ ಹೆಸರಿಲ್ಲ. ಏಕೆ?

ಬದುಕಿದ್ದಾಗ ಹೆಸರು ಮಾಡಲಿಲ್ಲವಂತೆ.

ಬಿ.ಆರ್. ಉಷಾ, ವಿದ್ಯಾನಗರ

ಒಳ್ಳೆಯ ಕಾಲ, ಕೆಟ್ಟ ಕಾಲ ಅಂತ ಇರತ್ತಾ?

ಊಹೂಂ. ಒಳಲೆಯ ಕಾಲ, ಕಟ್ಟಿಗೆ ಕಾಲವಂತೂ ಇರತ್ತೆ.

ಮಹಾವೀರ ಕಾಸರ, ಶಿವಮೊಗ್ಗ

ವಧು ಪರೀಕ್ಷೆಗೆ ಪಠ್ಯ ಇದೆಯೆ?



ಕಾಪಟ್ಯ ಇದೆ.

ಬಿ. ಚಂದ್ರೇಗೌಡ, ಬೆಂಗಳೂರು

ಸೆರೆಮನೆಗೂ, 'ಸೆರೆ' ಮನೆಗೂ ಏನು ವ್ಯತ್ಯಾಸ?

ಅಲ್ಲಿ 'ಇನ್' ಆಗುತ್ತಾರೆ; ಇಲ್ಲಿ 'ಔಟ್' ಆಗುತ್ತಾರೆ.

ಸೂರ್ಯಪ್ರಕಾಶ, ಹಾಸನ

ಷಡ್ಯಂತ್ರ ಯಾವ ಯಂತ್ರ? ಮೊದಲು ಯಾರು ಯಾವಾಗ ಎಲ್ಲಿ ಏತಕ್ಕಾಗಿ ಅನ್ವೇಷಿಸಿದರು?

ತಮಗೆ ಆಗದವರನ್ನು ಷೆಡ್ಡಿಗೆ ತಳ್ಳುವ ಯಂತ್ರ; ಕುಟಿಲರು ಸೋತಾಗ ಮನದಲ್ಲೇ ಸೇಡಿಗಾಗಿ ಅನ್ವೇಷಿಸಿದರು.

ಹೆಚ್.ವಿ. ಶ್ರೀಧರ್, ಬೆಂಗಳೂರು

ಫುಟ್ಬಾಲ್, ಹಾಕಿ, ಟೆನಿಸ್ ಆಡುವವರೆಲ್ಲ ಚಡ್ಡಿ ಹಾಕ್ಕೊಂಡು ಆಡ್ತಾರೆ. ಕ್ರಿಕೆಟಿಗರಿಗೆ ಪ್ಯಾಂಟ್ ಯಾಕೆ?

ಬೌಲಿಂಗ್ ಮಾಡುವಾಗ ಚೆಂಡನ್ನು ಉಜ್ಜಲು ಚಡ್ಡಿಯ ವಿಸ್ತೀರ್ಣ ಸಾಲುವುದಿಲ್ಲ.

ಪ್ರಶ್ನೆ ಕಳುಹಿಸಲು: editorsu@sudha.co.in

ರಾಮ್